ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 5287
ಸದಸ್ಯರ ಹೆಸರು : ಶ್ರೀ ನರಸಿಂಹ ನಾಯಕ್
ಉತ್ತರಿಸಬೇಕಾದ ದಿನಾಂಕ : 13–7–2005
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಸುರಪುರ ತಾಲೂಕಿನಲ್ಲಿ 142 ಶಿಕ್ಷಕರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು
ಆ.	ಬಂದಿದ್ದರೆ, ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?	ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಭರ್ತಿ ಬಗ್ಗೆ ಪರಿಶೀಲಿಸುತ್ತಿದ್ದು, ಶೀಘ್ರವೇ ಭರ್ತಿ ಮಾಡಲಾಗುವುದು.

ಇಡಿ112 ಪಿಎಂಎ 2005 ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.

ಶ್ರೀ ನರಸಿಂಹನಾಯಕ್: ಅಧ್ಯಕ್ಷರೇ ಸುರಪುರ ತಾಲೂಕಿನಲ್ಲಿ 142 ಶಿಕ್ಷಕರ ಕೊರತೆ ಸರ್ಕಾರದ ಗಮನಕ್ಕೆ ಬಂದಿದ್ದು, ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಭರ್ತಿ ಪರಿಶೀಲನೆಯಲ್ಲಿದೆಯಂತೆ. ನಾನು ಗೆದ್ದವನು ಮೂರ್ನಾಲ್ಕು ಸಲ ಇದನ್ನು ಕೇಳುತ್ತಿರುವುದು. ಇದೇ ಹೇಳುತ್ತಿದ್ದಾರೆ. ಇದೇನು ನಾವಿರುವ ಅವಧಿಯಲ್ಲೇ ಆಗುವುದೋ ಅಥವಾ ಮುಂದಿನ ಅವಧಿಯಲ್ಲಿ ಆಗುವುದೋ ಎಂಬ ಅನುಮಾನ ಬರುತ್ತಿದೆ. ಏಕೆಂದರೆ ನಮ್ಮ ಹೈದ್ರಾಬಾದ್ ಕರ್ನಾಟಕ ಮೊದಲೇ ಹಿಂದುಳಿದ ಪ್ರದೇಶ. ಅಲ್ಲಿ ಮಕ್ಕಳು ಶಾಲೆ ಕಲಿಯಬೇಕಾಗಿದ್ದರೇ ಕಷ್ಟದ ಪರಿಸ್ಥಿತಿ ಇದೆ. ಇವತ್ತು ಸರ್ಕಾರ ಸಾಕಷ್ಟು ಕ್ರಮ ಕೈಗೊಂಡಿದೆ; ಬಿಸಿಯೂಟ ಕಾರ್ಯಕ್ರಮ ಅದು ಇದು ಅಂತ, ಆ ಕಾರ್ಯಕ್ರಮ ಏನಾದರೂ ಒಂದು ರೂಪಕ್ಕೆ ಬರಬೇಕಾದರೆ ಅಲ್ಲಿ ಶಿಕ್ಷಕರ ಅವಶ್ಯತೆ ಬಹಳ ಇದೆ. ಶಿಕ್ಷಕರೇ ಇಲ್ಲದ ಇವತ್ತು ನಾವು ಶಾಲೆಗೆ ಕೊಠಡಿಯಾಗಲಿ ಇಂತಹ ಕಾರ್ಯಕ್ರಮ ಕೈಗೊಂಡರೆ ಏನೂ ಅರ್ಥವಿಲ್ಲ. ಅದಕ್ಕೋಸ್ಕರ ಮಾನ್ಯ ಸಚಿವರು ಯಾವಾಗ ಇದನ್ನು ಭರ್ತಿ ಮಾಡುವರೆಂದು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ: (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಅಧ್ಯಕ್ಷರೆ, ನಮಗೆ ಪ್ರಾಥಮಿಕ ಶಾಲೆಗಳಲ್ಲಿ 1.75 ಲಕ್ಷ ಶಿಕ್ಷಕರ ಅವಶ್ಯಕತೆ ಇದೆ. ಅದರಲ್ಲಿ 6848 ಟೀಚರ್ಸ್ ಹುದ್ದೆ ಮಾತ್ರ ಭರ್ತಿ ಮಾಡಬೇಕಾಗಿದೆ. ಇಡೀ ಗುಲ್ಬರ್ಗಾ ಜಿಲ್ಲೆಯಲ್ಲಿ ಖಾಲಿ ಇರುವುದು 423. ಅದರಲ್ಲಿ ನಿಮ್ಮ ತಾಲೂಕಿನಲ್ಲೇ 147 ಖಾಲಿ ಇವೆ. 6848 ಟೀಚರ್ಸ್ ಭರ್ತಿ ಮಾಡಲು ನಿನ್ನೆ ಎಫ್‌ಡಿಯಿಂದ ನಮಗೆ ಅನುಮತಿ ಸಿಕ್ಕಿದೆ. ಇನ್ನು ಮೂರ್ನಾಲ್ಕು ತಿಂಗಳಲ್ಲಿ ಇವನ್ನೆಲ್ಲ ಭರ್ತಿ ಮಾಡುತ್ತೇವೆ.

ಶ್ರೀ ನರಸಿಂಹನಾಯಕ್: ನಮ್ಮಲ್ಲಿ 30 ಶಾಲೆಗಳು ಹೊಸದಾಗಿ ಮಂಜೂರಾಗಿದೆ. ಅವುಗಳಿಗೆ ಕೊಠಡಿಯೂ ಇದೆ. ಆದರೆ 30 ಶಾಲೆಗಳಲ್ಲಿ ಒಬ್ಬರೂ ಶಿಕ್ಷಕರಿಲ್ಲ. ಅಲ್ಲಿ ಹುಡುಗರು ಎಲ್ಲಿಗೆ ಹೋಗಬೇಕು? ಹೇಗೆ ಶಾಲೆ ಕಲಿಯಬೇಕು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳುವರೆಂದು ಸಚಿವರು ತಿಳಿಸಬೇಕು.

ಶ್ರೀ ರಾಮಲಿಂಗಾರೆಡ್ಡಿ: ಟೀಚರ್ಸಿಲ್ಲದೆ ಶಾಲೆಗಳು ಇಲ್ಲ ಅಂತ ಇಲ್ಲ. ಡೆಪ್ಯುಟೇಶನ್ ಮಾಡಿರುತ್ತೇವೆ ಅಷ್ಟೇ ನಾವು. ಗುಲ್ಬರ್ಗಾ ಜಿಲ್ಲೆಯಲ್ಲಿ 423 ಖಾಲಿ ಇದೆ. ನಿಮ್ಮ ತಾಲೂಕಿನಲ್ಲಿ 147 ಖಾಲಿ ಇವೆ. ಈಗ 6848 ಹುದ್ದೆ ಭರ್ತಿಗೆ ಅನುಮತಿ ಸಿಕ್ಕಿದೆ. ಇದು ಭರ್ತಿಯಾದರೆ ನೂರಕ್ಕೆ ನೂರು 1:40ಯಂತೆ ಎಲ್ಲಾ ಶಾಲೆಗಳಲ್ಲೂ ಟೀಚರ್ಸಿದ್ದ ಹಾಗಾಗುತ್ತದೆ.

ಅಧ್ಯಕ್ಷರು: ಮುಂದಿನ ಪ್ರಶ್ನೆ ಆಲ್ಕೋಡು ಹನುಮಂತಪ್ಪ – **ಆಬ್ಸೆಂಟ್**

ಶ್ರೀ ಹಂಪನಗೌಡ ಬಾದರ್ಲಿ – **ಆಬ್ಸೆಂಟ್**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4996
ಸದಸ್ಯರ ಹೆಸರು : ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ)
ಉತ್ತರಿಸಬೇಕಾದ ದಿನಾಂಕ : 13–7–2005
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಜಿಲ್ಲಾ ಕೇಂದ್ರವಾದ ಕಾರವಾರದ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಕಾರವಾರ ಜಿಲ್ಲಾ ಆಸ್ಪತ್ರೆಯಲ್ಲಿ 25 ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, 21 ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ, 4 ಹುದ್ದೆಗಳು ಖಾಲಿ ಇರುತ್ತದೆ
ಆ.	ಹಾಗಿದ್ದರೆ ಸರ್ಕಾರ ಈವರೆಗೆ ವೈದ್ಯರನ್ನು ನೇಮಕ ಮಾಡದಿರಲು ಕಾರಣವೇನು;	ಖಾಲಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳು ಅರ್ಜಿಗಳನ್ನು ಆಹ್ವಾನಿಸಿದ್ದು, ಅರ್ಹ ಅಭ್ಯರ್ಥಿಗಳು ಲಭ್ಯವಾಗಿರುವುದಿಲ್ಲ.
ಇ.	ವೈದ್ಯರ ನೇಮಕ ಮಾಡಲು ಇರುವ ತೊಂದರೆಗಳೇನು ?	ಕೆಲವು ತಜ್ಞತೆಗಳ ಕೊರತೆ ಇರುವುದರಿಂದ ಹಾಗೂ ಅರ್ಹ ಅಭ್ಯರ್ಥಿಗಳು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಲಭ್ಯವಿಲ್ಲದಿರುವುದರಿಂದ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿರುವುದಿಲ್ಲ.